ಸಾಕ್ಷಿಯನ್ನು ದಿಃ 03.08.2017 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಆರ್‌ಆರ್‌ಎನ್ ವಕೀಲರಿಂದಃ

ವಾದಿ ಸಣ್ಣಮ್ಮ ನಮ್ಮ ತಂದೆಯ ಹೆಸರಿನಲ್ಲಿ ಇರುವ ನಿವೇಶನಕ್ಕೆ ಸಂಬಂಧಪಟ್ಟಂತೆ ದಾವೆ ಹಾಕಿರುತ್ತಾರೆ. ನಾನು ಎಂಎ ಪದವಿ ಓದಿರುತ್ತೇನೆ. ವಾದಿ ದಾಖಲು ಮಾಡಿದ ದಾವೆಯನ್ನು ಓದಿ ತಿಳಿದುಕೊಂಡಿಲ್ಲ. ನಮ್ಮ ತಂದೆಗೆ 1ನೇ ಪ್ರತಿವಾದಿ ನೀಡಿರುವ ಸೈಟ್ ಯರಗನಹಳ್ಳಿ ಸರ್ವೇ ನಂಃ 54, 55, 56 ಮತ್ತು ಇನ್ನುಳಿದ ನಂಬರ್‌ಗೆ ಸೇರಿರುತ್ತದೆ. ಟೀಚರ್ಸ್ ಲೇಔಟ್ ಕ್ಯಾತಮಾರನಹಳ್ಳಿ ಸರ್ವೇನಂಬರ್‌ನಲ್ಲಿ ಬರುವುದಿಲ್ಲ ಅಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಯರಗನಹಳ್ಳಿ ಸರ್ವೇನಂಬರ್‌ಗಳಲ್ಲಿ ಟೀಚರ್ಸ್ ಲೇಔಟ್ ಬರುತ್ತದೆ. ದಾವಾಸ್ವತ್ತಿಗೂ ಟೀಚರ್ಸ್ ಲೇಔಟ್‌ಗೂ ಸಂಬಂಧ ಇಲ್ಲ ಅಂದರೆ ಸರಿ. ದಾವಾಸ್ವತ್ತು ವಾದಿಯ ಸ್ವತ್ತು ಅಂದರೆ ಇರಬಹುದು. ಕ್ಯಾತಮಾರನಹಳ್ಳಿ ಮತ್ತು ಯರಗನಹಳ್ಳಿ ಗಡಿ ನೇರ ಬರುತ್ತದೋ ಅಥವಾ ಡೊಂಕಾಗಿರುತ್ತದೆಯೋ ನಕಾಶೆ ನೋಡಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಿಗೂ ದಾವಾಸ್ವತ್ತಿಗೂ ಸಂಬಂಧ ಇಲ್ಲ ಅಂದರೆ ಸರಿ. ಪುನಃ ಹೇಳುತ್ತೇನೆ ಸಂಬಂಧ ಇದೆ. ಅಸಲು ದಾವಾ ನಂಃ 670/03 ನ್ನು ಸಣ್ಣಮ್ಮನ ಕಡೆಯವರು ನಮ್ಮ ತಂದೆಯ ವಿರುದ್ದ ಹಾಕಿದ್ದರು. ಅಸಲು ದಾವಾ ನಂಃ 289/96 ನ್ನು ಯಾರು ಯಾರ ವಿರುದ್ದ ಯಾವ ಆಸ್ತಿಗೆ ಸಂಬಂಧಪಟ್ಟಂತೆ ಹಾಕಿದ್ದರು ಎಂದು ಗೊತ್ತಿಲ್ಲ. ಅಸಲು ದಾವಾ ನಂಃ 117/91 ನ್ನು ಸಣ್ಣಮ್ಮನ ಕಡೆಯವರು ನನ್ನ ತಂದೆಯ ವಿರುದ್ದ ಹಾಕಿದ್ದರು. ಮೇಲೆ ಹೇಳಿದ ದಾವೆಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಣ್ಣಮ್ಮ ಈ ದಾವೆ ಹೊರತುಪಡಿಸಿ ಬೇರೆ ದಾವೆ ಹಾಕಿರಲಿಲ್ಲ ಅಂದರೆ ಇರಬಹುದು. ಈ ದಾವೆಯಲ್ಲಿ ನನ್ನ ತಂದೆಯನ್ನು ಪಾರ್ಟಿ ಮಾಡಿದ್ದರು ಆದರೆ ಆಗ ಅವರು ತೀರಿಕೊಂಡಿದ್ದರು, ಆಮೇಲೆ ನಾನು ಹಾಗೂ ನನ್ನ ತಾಯಿ ಈ ದಾವೆಯಲ್ಲಿ ಸೇರಿಕೊಂಡಿರುತ್ತೇವೆ. ಮೈಸೂರಿನ ಡಾಃ ರಾಜಕುಮಾರ್ ರಸ್ತೆ ನೋಡಿರುತ್ತೇನೆ. ಸದರಿ ರಸ್ತೆ ಟೀಚರ್ಸ್ ಲೇಔಟ್‌ನ ಪಶ್ಚಿಮಕ್ಕೆ ಬರುತ್ತದೆ

ಅಂದರೆ ಸರಿ. ಸದರಿ ರಸ್ತೆಯ ಪಶ್ಚಿಮಕ್ಕೆ ಕ್ಯಾತಮಾರನಹಳ್ಳಿ ಗಡಿ ಬರುತ್ತದೆ ಅಂದರೆ ಸಾಕ್ಷಿಯು ನಮ್ಮ ಸೈಟ್ ಆದ ಮೇಲೆ ಕ್ಯಾತಮಾನರನಹಳ್ಳಿ ಗಡಿ ಬರುತ್ತದೆ ಎಂದು ಹೇಳುತ್ತಾರೆ.

ಕ್ಯಾತಮಾರನಹಳ್ಳಿಯ ಸಃನಂಃ 176 ರ ಪೂರ್ವಭಾಗದಲ್ಲಿ ಟೀಚರ್ಸ್ ಲೇಔಟ್‌ನ ಕೆಲವು ಸದಸ್ಯರು ಕಾಂಪೌಂಡ್ ಹಾಕಿದಾಗ ವಾದಿ ಮತ್ತು ನಮ್ಮ ನಡುವೆ ಗಲಾಟೆ ಆಗಿರುತ್ತದೆ ಅಂದರೆ ಸರಿ. ಆ ಬಗ್ಗೆ ಪೊಲೀಸ್ ಕಂಪ್ಲೇಂಟ್ ಆಗಿರುತ್ತದೆ. ಅದಾದ ಮೇಲೆ ವಾದಿ ಈ ದಾವೆ ಹಾಕಿರುತ್ತಾರೆ ಅಂದರೆ ಸರಿ. ಆಗಿನಿಂದಲೂ ದಾವಾ ಆಸ್ತಿಯ ಪೂರ್ವಭಾಗ ಹೇಗೆ ಇತ್ತೋ ಹಾಗೆಯೇ ಇದೆ ಅಂದರೆ ಸರಿ. ಯರಗನಹಳ್ಳಿ ಗ್ರಾಮ ಮತ್ತು ಕ್ಯಾತಮಾರನಹಳ್ಳಿ ಗ್ರಾಮಗಳ ಗಡಿ ಗುರುತಿಸುವಿಕೆಗೆ ಏನಾದರೂ ತಕರಾರು ಇದೆಯೇ ಅಂದರೆ ಸಾಕ್ಷಿ ಈಗಾಗಲೇ ಗುರುತಿಸಲಾಗಿದೆ ಅನ್ನುತ್ತಾರೆ. ಯಾವ ದಾವೆಯಲ್ಲಿ ಸಂಬಂಧಪಟ್ಟ ದಾಖಲೆ ಹಾಜರು ಪಡಿಸಿರುತ್ತೇವೆ ಎಂದು ನನಗೆ ಗೊತ್ತಿಲ್ಲ ನನ್ನ ತಂದೆಗೆ ಗೊತ್ತಿತ್ತು. ಕ್ಯಾತಮಾರನಹಳ್ಳಿಯ ಸಃನಂಃ 176 ರ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಅಂದರೆ ಸರಿ. ವಾದಿಯ ಆಸ್ತಿ ಕಬಳಿಸುವ ಉದ್ದೇಶದಿಂದ ದಾವಾ ಆಸ್ತಿಯಲ್ಲಿ ಅತಿಕ್ರಮಣ ಮಾಡಿ ಕಲ್ಲು ನೆಟ್ಟಿಸಿರುತ್ತೇವೆ ಅಂದರೆ ಸರಿಯಲ್ಲ. ಉಳಿದ ಪ್ರತಿವಾದಿಯರ ಮಾತು ಕೇಳಿ ನಾವುಗಳು ಕೂಡ ಅತಿಕ್ರಮಣ ಮಾಡಿರುತ್ತೇವೆ ಅಂದರೆ ಸರಿಯಲ್ಲ. ಸಣ್ಣಮ್ಮ ಪಕ್ಷಕಾರರಾಗಿರುವ ಯಾವುದೇ ದಾವೆಯಲ್ಲಿ ಗಡಿಯನ್ನು ಗುರುತಿಸಿಲ್ಲ ಅಂದರೆ ಗೊತ್ತಿಲ್ಲ. ನಾನು ಮತ್ತು ಟೀಚರ್ಸ್ ಲೇಔಟ್‌ನ ಉಳಿದ ಸದಸ್ಯರು ಸೇರಿಕೊಂಡು ಸಣ್ಣಮ್ಮ ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ಸಣ್ಣಮ್ಮನ ಆಸ್ತಿ ಕಬಳಿಸುವ ಸಲುವಾಗಿ 1ನೇ ಪ್ರತಿವಾದಿಯೊಂದಿಗೆ ಷಾಮೀಲಾಗಿ ಸೃಷ್ಠಿಸಿ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ,

ಸಹಿ/-

ಪ್ರಧಾನ ಲಘು ವ್ಯವಹಾರಗಳ ಮತ್ತು ಸಿವಿಲ್

ನ್ಯಾಯಾಧೀಶರು (ಹಿ.ವಿ.), ಮೈಸೂರು